ದಿನಾಂಕ 16.07.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ACC ವಕೀಲರಿಂದ:**

ನಾನು ಕನಕಪುರದಲ್ಲಿ ವಾಸವಾಗಿರುತ್ತೇನೆ. ನನ್ನ ತಮ್ಮ ಬೊಮ್ಮೇಗೌಡ ಉ. ಶಿವ ಸಹ ಕನಕಪುರದಲ್ಲಿ ವಾಸವಾಗಿರುತ್ತಾರೆ. ನಾನು SSLC ವರೆಗೆ ಓದಿರುತ್ತೇನೆ. ನ್ಯಾಯಾಲಯಕ್ಕೆ ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರ ವನ್ನು ನಾನೇ ಬರೆಸಿ ಹಾಕಿರುತ್ತೇನೆ. ಈ ದಾವೆಯನ್ನು ಪ್ರತಿವಾದಿ 2 ಮತ್ತು 3 ರವರ ಮೇಲೆ ಹಾಕಿರುತ್ತೇನೆ. ದಾವಾ ಸ್ವತ್ತು ಪ್ರತಿವಾದಿಯ ಹೆಸರಿನಲ್ಲಿ ಪಹಣಿ ಬರುತ್ತಿದೆ. ಪಹಣಿ ಪ್ರತಿವಾದಿಯ ಹೆಸರಿನಲ್ಲಿ ಯಾವ ಆಧಾರದ ಮೇಲೆ ಬಂದಿದೆ ಎಂದು ನೋಡಿರುತ್ತೀರಾ ಎಂದರೆ ಸಾಕ್ಷಿದಾರರು ನೋಡಿರುವುದಾಗಿ ನುಡಿಯುತ್ತಾರೆ.

ಸರ್ವೆ ನಂ.81/3 ಚನ್ನಸಂದ್ರ ಗ್ರಾಮ ದ ಸಂಬಂಧ ದಾವೆ ಹಾಕಿರುತ್ತೇನೆ. ಸದರಿ ಸ್ವತ್ತಿನ ಹಳೆಯ ನಂಬರ್ 81/1 ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ಪಿತ್ರಾರ್ಜಿತವಾಗಿರುತ್ತದೆ ಎಂದು ಹೇಳಿರುತ್ತೀರಿ , ನಿಮ್ಮ ತಂದೆಗೆ ಯಾರಿಂದ ಬಂದಿರುತ್ತದೆ ಎಂದರೆ ಸಾಕ್ಷಿದಾರರು ವನಜಾಕ್ಷಮ್ಮ ರವರಿಂದ ಕ್ರಯಕ್ಕೆ ಪಡೆದಿರುವುದಾಗಿ ನುಡಿಯುತ್ತಾರೆ. ಸರ್ವೆ ನಂ.9/4 ರಲ್ಲಿ ನಿಮ್ಮ ತಂದೆಗೆ 2 ಎಕರೆ ಇದೆ ಎಂದರೆ ಸರಿ . ನಿಮ್ಮ ತಂದೆಯ ಹೆಸರಿನಲ್ಲಿ ಎಷ್ಟು ಮನೆಗಳು ಇವೆ ಎಂದರೆ ಸಾಕ್ಷಿದಾರರು ಒಂದು ಎಂದು ನುಡಿಯತ್ತಾರೆ. ನಿಮ್ಮ ತಂದೆಯ ಹೆಸರಿನಲ್ಲಿ 2 ಮನೆಗಳು ಇವೆ ಎಂದರೆ ಗೊತ್ತಿಲ್ಲ.

1996 ರಲ್ಲಿ ನಿಮ್ಮ ತಂದೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಏನು ವ್ಯವಹಾರ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಸುಜ್ಞಾನಮೂರ್ತಿಗೆ ಸೇರಿದ್ದು , ಆ ಸ್ವತ್ತಿನ ಸಬಂಧ ಭಾಗ ಮಾಡಿಕೊಂಡಿರುವುದಾಗಿ ಸಾಕ್ಷಿದಾರರು ನುಡಿಯುತ್ತಾರೆ. ನೀವು ಭಾಗ ಮಾಡಿಕೊಳ್ಳುವಾಗ ಈ ದಾವಾ ಸ್ವತ್ತನ್ನು ಹೊರತು ಪಡಿಸಿ ನಿಮ್ಮ ತಂದೆಯ ಹೆಸರಿನಲ್ಲಿದ್ದ ಸರ್ವೆ ನಂ. 9/4 ಮತ್ತು ಮನೆಗಳನ್ನು ಪಾಲು ಪಟ್ಟಿಯಲ್ಲಿ ಸೇರಿಸಿಲ್ಲ ಎಂದರೆ ಸರಿ . ಯಾವ ಉದ್ದೇಶಕ್ಕಾಗಿ ಸದರಿ ಸ್ವತ್ತುಗಳನ್ನು ಭಾಗದ ಪಟ್ಟಿಯಲ್ಲಿ ಸೇರಿಸಿಲ್ಲ ಎಂದರೆ ಗೊತ್ತಿಲ್ಲ. ಇಷ್ಟು ಕೊಟ್ಟಿರುವುದಾಗಿ ನುಡಿಯುತ್ತಾರೆ. ಈ ದಾವೆ ಹಾಕಲು ದಾಖಲಾತಿಯನ್ನು ಸೃಷ್ಟಿ ಮಾಡಿಕೊಳ್ಳಬೇಕಾಗಿತ್ತು , ಆ ಕಾರಣದಿಂದ ನೀವು ಅಣ್ಣ ತಮ್ಮಂದಿರು ದಾವಾ ಸ್ವತ್ತು ಗಳನ್ನು ವಿಭಾಗ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನಿಮಗೆ ಯಾವುದೇ ಹಕ್ಕು , ಸ್ವಾ ಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

ಈಗ ದಾವಾ ಸ್ವತ್ತಿನ ನ ಪಹಣಿ 3 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ನೀವು ಎಸಿ ನ್ಯಾಯಾಲಯದಲ್ಲಿ ಹಾಕಿರುವ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿ . ನೀವು ಗ್ರಾಮದಲ್ಲಿ ಎಲ್ಲರೊಂದಿಗೆ ಚೆನ್ನಾಗಿದ್ದೀರಿ ಎಂದರೆ ಸರಿ . ನೀವು ಜನಗಳನ್ನು ಕಟ್ಟಿಕೊಂಡು ದಾವಾ ಸ್ವತ್ತನ್ನು ಕಬಳಿಸಲು ಪ್ರಯತ್ನ ಪಟ್ಟಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನೀವು ಸ್ವಾಧೀನಾನುಭವದಲ್ಲಿ ಇಲ್ಲದೇ ಇರುವುದರಿಂದ ಪ್ರತಿವಾದಿ ಅಕ್ರಮ ಪ್ರವೇಶ ಮಾಡುವ ಸಂಭವ ಉದ್‌ಭವಿಸಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಪ್ರತಿವಾದಿ ಅಕ್ರಮ ಪ್ರವೇಶ ಮಾಡಿರುತ್ತಾರೆ ಹಾಗೂ ನೀವು ದೂರು ನೀಡಿದ್ದೀರಾ ಎಂದರೆ ಸಾಕ್ಷಿದಾರರು ದೂರು ನೀಡಿರುವುದಿಲ್ಲ ಎಂದು ನುಡಿಯತ್ತಾರೆ. ನೀವು ಸುಳ್ಳು ದಾಖಲಾತಿ ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆ ಹಾಕಿರುತ್ತೀರಿ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ನಿಮ್ಮ ತಂದೆ 01.12.1990 ರಲ್ಲಿ ವನಜಾಕ್ಷಮ್ಮ ರವರಿಂದ ಕ್ರಯಕ್ಕೆ ಪಡೆದಿದ್ದರು ಎಂದರೆ ಸರಿ . ಆ ಸಮಯದಲ್ಲಿ ನೀವು ಮತ್ತು ನಿಮ್ಮ ಅಣ್ಣ ಅಪ್ರಾಪ್ತ ವಯಸ್ಕರು ಎಂದರೆ ಸರಿಯಲ್ಲ . 2020 ರಲ್ಲಿ ನಿಮಗೆ 44 ವರ್ಷ ವಯಸ್ಸಾಗಿತ್ತು ಎಂದರೆ ಸರಿ . 1990 ರಲ್ಲಿ ನೀವು ಅಪ್ರಾಪ್ತ ವಯಸ್ಕರು ಎಂದರೆ ಸರಿಯಲ್ಲ. ನಿಮ್ಮ ಮನೆಯಲ್ಲಿ ಹಣಕಾಸಿನ ವ್ಯವಹಾರ ನಿಮ್ಮ ತಂದೆ ಮಾಡುತ್ತಿದ್ದರು ಎಂದರೆ ಸರಿ .

ದಿನಾಂಕ 30.05.1996 ರಲ್ಲಿ ಸರ್ವೆ ನಂ. 9/4, ದಾವಾ ಸರ್ವೆ ನಂ. , ಮತ್ತು ಇತರೆ ಎರಡು ಮನೆಗಳನ್ನು ಬ್ಯಾಂಕಿನಲ್ಲಿ ಅಡಮಾನ ಮಾಡಿ ನಿಮ್ಮ ತಂದೆ ಸಾಲ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ . ಬೆಂಗಳೂರು ಗ್ರಾಮಾಂತರ ಸಂಘದಲ್ಲಿ ಸುಮಾರು 4,80,000/- ಸಾಲವನ್ನು ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಆ ಪ್ರಕಾರ ಬಿಡಿ ಸಿಸಿ ಬ್ಯಾಂಕ್ ನವರು ದಾಖಲೆ ನಂ. 1490/99 ಅನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ನೀವು ನನಿಮ್ಮ ತಂದೆಯ ಮೇಲೆ ಈ ದಾವೆ ಹಾಕಿರುತ್ತೀರಿ , ನಿಮ್ಮ ತಂದೆ ಯಾವುದೇ ರೀತಿಯಲ್ಲಿ ದಾವಾ ಸ್ವತ್ತಿನಲ್ಲಿ ಅಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿ . ಯಾವ ಉದ್ದೇಶಕಾಗಿ ನಿಮ್ಮ ತಂದೆಯನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸಾಲ ಪಡೆದಿರುವ ಬಗ್ಗೆ ನಿಮ್ಮ ತಂದೆಯನ್ನು ಕೇಳಿರುತ್ತೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡು , ನಿಮ್ಮ ತಂದೆಯವರಿಗೆ ದಾವಾ ಸ್ವತ್ತನ್ನು ಅಡಮಾನ ಮಾಡಿರುವ ಬಗ್ಗೆ ಕೇಳಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

2021 ರಲಿ ನಮ್ಮ ತಂದೆ ತೀರಿಕೊಂಡಿರುತ್ತಾರೆ. ನಿಮ್ಮ ತಂದೆ ಬದುಕಿರುವಾಗಲೇ ಎಡಿಸಿಸಿ ಬ್ಯಾಂಕ್ ನವರು ಅವರ ಮೇಲೆ Money Recovery Suit ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ನಿಮ್ಮ ತಂದೆ 10 ವರ್ಷ ಪ್ರಕರಣ ನಡೆಸಿರುತ್ತಾರೆ ಎಂದರೆ ಗೊತ್ತಿಲ್ಲ.

ನಿಮ್ಮ ತಂದೆ ಮೇಲೆ ಹಾಕಿದ್ದ JRB /3 Dis No 1215/97-98 ರ ಪ್ರಕರಣ ಪುರಸ್ಕರಿಸಿದ್ದಾರೆ ಎಂದರೆ ಗೊತ್ತಿಲ್ಲ. ನಿಮ್ಮ ತಂದೆ ಮೇಲೆ ಹಾಕಿದ್ದ EX. CEP 199/2000 -01ರ ಪ್ರಕರಣದಲ್ಲಿ ನಿಮ್ಮ ತಂದೆಗೆ ಸೇರಿದ್ದ ಆಸ್ತಿಯನ್ನು ಹರಾಜು ಮಾಡುವಂತೆ ಆದೇಶ ವಾಗಿತ್ತು ಎಂದರೆ ಸಾಕ್ಷಿದಾರರು ನೋಟಿಸ್ ಬಂದಿಲ್ಲ ಎಂದು ನುಡಿಯುತ್ತಾರೆ.

**ವಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ವಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ